ಕರ್ನಾಟಕ ವಿಧಾನಸಭೆ

ಶನಿವಾರ 30ನೇ ಅಕ್ಟೋಬರ್ 1999ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ. ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

I ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ ಕಲಂ 8(3)ರ ಮೇರೆಗೆ;

1. ಪ್ರಾಥಮಿಕ, ಪ್ರೌಢ ಶಾಲಾ ಶಿಕ್ಷಕರು, ಸರ್ಕಾರಿ ಕಿರಿಯ ಕಾಲೇಜುಗಳ ಉಪನ್ಯಾಸಕರು, ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರು, ಪಾಲಿಟೆಕ್ನಿಕ್ ಉಪನ್ಯಾಸಕರು, ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನ ಉಪನ್ಯಾಸಕ ಹುದ್ದೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರನ್ನು ರಾಜ್ಯದ ಸಿವಿಲ್ ಸೇವೆಗಳಲ್ಲಿ ವಿಲೀನಗೊಳಿಸುವ ನಿಯಮಾವಳಿಗಳನ್ನು ರಚಿಸಿ ದಿನಾಂಕ 8-10-99ರಂದು ಹೊರಡಿಸಿದ ಡಿಪಿಎಆರ್ 12 ಎಸ್ಆರ್ಇ 97ನೇ ಸಂಖ್ಯೆಯ ಅಧಿಸೂಚನೆ;
2. ರಾಜ್ಯಪಾಲರ ಗೃಹ ಸಿಬ್ಬಂದಿ ಹಾಗೂ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಸಂಬಂಧವಾಗಿ ದಿನಾಂಕ 7-10-99 ರಂದು ಹೊರಡಿಸಿದ ಡಿಪಿಎಆರ್ 28 ಎಸ್ಆರ್ಇ 98ನೇ ಸಂಖ್ಯೆ ಅಧಿಸೂಚನೆ;
3. ತಹಸೀಲ್ದಾರ್ ಗ್ರೇಡ್ 1 ವೃಂದದಿಂದ ಕರ್ನಾಟಕ ಆಡಳಿತ ಸೇವೆ ಗ್ರೂಪ್. ಎ (ಕಿರಿಯ ಶ್ರೇಣಿ) ವೃಂದಕ್ಕೆ ಬಡ್ತಿ ನೀಡಲು ಹಾಲಿ ನಿಗದಿಪಡಿಸಿರುವ 8 ವರ್ಷಗಳ ಕನಿಷ್ಠ ಅರ್ಹತಾ ಸೇವಾವಧಿಯನ್ನು 5 ವರ್ಷಗಳಿಗೆ ಕಡಿಮೆಗೊಳಿಸಿ 1957ರ ಕರ್ನಾಟಕ ಆಡಳಿತ ಸೇವೆಗಳು (ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 11-10-99 ರಂದು ಹೊರಡಿಸಿದ ಡಿಪಿಎಆರ್ 13 ಎಸ್ಆರ್ಇ 99ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, 1964ರ ಕರ್ನಾಟಕ ಸಿನಿಮಾ ನಿಯಂತ್ರಣ ಅಧಿನಿಯಮ ಕಲಂ 20ರ ಮೇರೆಗೆ;

1. ಬಳ್ಳಾರಿ ಜಿಲ್ಲೆ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ದೋಣಿಮಲೈ ರವರಿಗೆ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 3-8-99 ರಂದು ಹೊರಡಿಸಿದ ಹೆಚ್‌ಡಿ 15 ಸಿಎನ್ಎ 99ನೇ ಸಂಖ್ಯೆಯ ಅಧಿಸೂಚನೆ;
2. ಎನ್.ಸಿ.ವೈ.ಪಿ. ಚನೈ ಇವರು ಬಳ್ಳಾರಿ ಜಿಲ್ಲೆಯಲ್ಲಿ ಆಯ್ದ ಚಿತ್ರಮಂದಿರಗಳಲ್ಲಿ ಮಕ್ಕಳ ಚಲನಚಿತ್ರಗಳನ್ನು ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 31-7-99 ರಂದು ಹೊರಡಿಸಿದ ಹೆಚ್‌ಡಿ 22 ಸಿಎನ್ಎ 99ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III ಶ್ರೀ ರಮಾನಾಥ ರೈ (ಮೀನುಗಾರಿಕೆ ಹಾಗೂ ಬಂದರು ಮಂತ್ರಿ) : ಮಾನ್ಯ ಅಧ್ಯಕ್ಷರೇ, 1956ರ ಕಂಪನಿಗಳ ಕಾಯ್ದೆಯ 619(ಎ) ಕಲಂ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ 13ನೇ ವಾರ್ಷಿಕ ಮತ್ತು ಲೆಕ್ಕಪತ್ರಗಳ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು: ಈಗ ಉಪಾಧ್ಯಕ್ಷರ ಚುನಾವಣೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ನೀಡುವುದರ ಬಗ್ಗೆ ಒತ್ತಾಯ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಇವತ್ತು ಉಪ ಸಭಾಧ್ಯಕ್ಷರನ್ನು ಆಯ್ಕೆ ಮಾಡುವ ಕಾರ್ಯಕ್ರಮ ಇದೆ ಲೋಕಸಭೆಯಲ್ಲಿ ಯಾವ ರೀತಿಯಲ್ಲಿ ಎನ್.ಡಿ.ಎ. ಸರ್ಕಾರ ಸತ್ಸಂಪ್ರದಾಯದ ಪ್ರಕಾರ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಒಂದು ಸೌಹಾರ್ದಯುತ ವಾತಾವರಣ ನಿರ್ಮಿಸಬೇಕು, ವಿರೋಧ ಪಕ್ಷಗಳಿಗೂ ಒಂದು ಗೌರವ ನೀಡಬೇಕೆಂಬ ಸದುದ್ದೇಶದಿಂದ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷಕ್ಕೆ ಬಿಟ್ಟು ಕೊಟ್ಟಿದೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ಅದೇ ಸಂಪ್ರದಾಯವನ್ನು ನಮ್ಮ ಆಡಳಿತರೂಢ ಪಕ್ಷದವರು ಪಾಲಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇವತ್ತಿನವರೆಗೂ, ಈ ಕ್ಷಣದವರೆಗೂ ಈ ವಿಷಯವಾಗಿ ಅಲ್ಲದೇ ಅಧ್ಯಕ್ಷರ ಚುನಾವಣೆ ನಡೆದಂತಹ ಸಂದರ್ಭದಲ್ಲೂ ಸಹಿತ, ವಿರೋಧ ಪಕ್ಷದ ಧುರೀಣರನ್ನು, ಶಾಸಕರುಗಳನ್ನು ಆಡಳಿತ ಪಕ್ಷ ಕನ್‌ಸಲ್ಟ್ ಮಾಡಲಿಲ್ಲ. ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲೇ ವಿಷಾದವನ್ನೂ ಕೂಡ ವ್ಯಕ್ತಪಡಿಸಿದರು. ಉಪಾಧ್ಯಕ್ಷರ ಚುನಾವಣೆಗೆ ನಿನ್ನೆ ನಾಮಿನೇಷನ್ ಸಲ್ಲಿಸಲಾಗಿದೆ. ಈ ಕ್ಷಣದವರೆಗೂ ಉಪಾಧ್ಯಕ್ಷರ ಚುನಾವಣೆ ಸರ್ವಾನುಮತದಿಂದ ನಡೆಯುವಂತೆ ಮಾಡುವುದಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಂತಹ ಸೌಹಾರ್ದಯುತವಾದ ವಾತಾವರಣ ನಿರ್ಮಾಣವಾಗಿಲ್ಲ. ಆ ರೀತಿಯ ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಲಿಕ್ಕೆ ಪ್ರಯತ್ನವನ್ನೂ ಕೂಡ ಆಡಳಿತ ಪಕ್ಷ ಮಾಡಿಲ್ಲ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಒಂದು ಸೌಹಾರ್ದಯುತ ವಾತಾವರಣ ಮೂಡಿಸುವ ಸಲುವಾಗಿ ಮತ್ತು ಸತ್ಸಂಪ್ರದಾಯವನ್ನು ಕಾಯ್ದುಕೊಳ್ಳುವ ಸಲುವಾಗಿ, ಇಡೀ ಕರ್ನಾಟಕವೇ ಇತರ ರಾಜ್ಯಗಳಿಗೆ ಮಾದರಿಯಾಗುವ ರೀತಿಯಲ್ಲಿ, ಸದನದ ಉಪಾಧ್ಯಕ್ಷರ ಸ್ಥಾನವನ್ನು ವಿರೋಧ ಪಕ್ಷದವರಿಗೆ ದಯವಿಟ್ಟು ಬಿಟ್ಟು ಕೊಟ್ಟು ವಿರೋಧ ಪಕ್ಷಗಳ ಅಭ್ಯರ್ಥಿಯನ್ನು ಸರ್ವಾನುಮತದಿಂದ ಚುನಾಯಿಸಬೇಕೆಂದು ನಾನು ಆಡಳಿತ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ವಿಚಾರಗಳನ್ನು ಸದನಕ್ಕೆ ತಿಳಿಸಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, ಸತ್ ಸಂಪ್ರದಾಯಗಳ ಬಗ್ಗೆ ಮಾತನಾಡುವುದು ಸುಲಭ, ಆದರೆ ಅವುಗಳನ್ನು